ಶ್ರೀ ಕೆ.ಆರ್. ರಮೇಶ್‌ಕುಮಾರ್: ಮಾನ್ಯ ಅಧ್ಯಕ್ಷರೆ, ನಿಮಗೆ ಸಹಾಯ ಮಾಡುವುದಕ್ಕೆ ನಾನು ಏನು ಹೇಳುತ್ತೇನೆಂದರೆ, ನರೇಂದ್ರಬಾಬುರವರಿಗೆ ಗೊತ್ತಿಲ್ಲ What he is doing is not correct. ಈ ರೀತಿಯಾದರೆ ಸದನ ನಡೆಸುವುದಕ್ಕೆ ನಿಮಗೆ ಬಹಳ ಕಷ್ಟವಾಗುತ್ತದೆ. ತಾವು ಹತ್ತು ನಿಮಿಷ ಡೆಮ್ಯಟಿ ಸ್ಪೀಕರ್‌ರವರನ್ನು ಕೂರಿಸಿ ಇವರಿಗೆ ಐದು ನಿಮಿಷಕಾಲ ನಿಮ್ಮ ಟೀ ರೂಂನಲ್ಲಿ ಕೂರಿಸಿಕೊಂಡು ನಿಮ್ಮ ಆಫೀಸರ್ಸ್ ಇಟ್ಟಿಕೊಂಡು ಅವರಿಗೆ ಬ್ರೀಫಿಂಗ್ ಕೊಟ್ಟರೆ ಸುಲಭ. ಅವರಿಗೆ lack of training. ಅವರಿಗೆ ಐಡಿಯಾ ಇಲ್ಲ.

ಅಧ್ಯಕ್ಷರು: ಐಡಿಯಾ ಇಲ್ಲಾ ಅಂತಲ್ಲ. ಅವರಿಗೆ ಏನು ಅಂದರೆ ಅವರ ಸಮಸ್ಯೆಗಳನ್ನು ಎತ್ತಿ ಚರ್ಚೆ ಮಾಡಬೇಕು. ಅವರ ಈ ಒಂದು ಆಸಕ್ತಿ ಏನಿದೆ ಅದನ್ನು ಮೆಚ್ಚತಕ್ಕಂಥದ್ದೇ ಆಗಿದೆ. ಆದರೆ ಗಮನ ಸೆಳೆಯುವ ಸೂಚನೆ ಮುಖಾಂತರ ಈ ರೀತಿ ಭಾಷಣ ಮಾಡಿದರೆ ಹೇಗೆ? ಬಜೆಟ್ ಮೇಲೆ ಅವರು ಮಾತನಾಡುಬಹುದು. ಬಜೆಟ್ ಮೇಲೆ ಚರ್ಚೆ ನಡೆಯುತ್ತಿದೆ. ಆಗ ಅದರ ಬಗ್ಗೆ ಮಾತನಾಡಬಹುದು.

ಶ್ರೀ ಕೆ.ಆರ್. ರಮೇಶ್‌ಕುಮಾರ್: ಕಾಲಿಂಗ್ ಅಟೆನ್‌ಶನ್ ಬಗ್ಗೆ ಇರುವ ಇತಿಮಿತಿ ಕಲ್ಪನೆ ಅವರಿಗೆ ಇಲ್ಲ. ಎಲ್ಲೋ ಒಂದು ಕಡೆಗೆ ನವು ಅವರಿಗೆ ಟ್ರೈನಿಂಗ್ ಕೊಡುವುದರಲ್ಲಿ ವಿಫಲರಾಗಿದ್ದೇವೆ. You must evince personally.

ಅಧ್ಯಕ್ಷರು: ಟ್ರೈನಿಂಗ್‌ನ್ನು ಮೊದಲು ಕೊಟ್ಟಿದ್ದೇವೆ. ಏನಾಯ್ತು ಕೇಳಿ.

ಶ್ರೀ ನೆ.ಲ. ನರೇಂದ್ರಬಾಬು: ಬೆಂಗಳೂರು ನಗರದಲ್ಲಿ 70 ಲಕ್ಷ ಜನರು ಸಫರ್ ಆಗುತ್ತಿದ್ದಾರೆ.

ಅಧ್ಯಕ್ಷರು: ಆಯ್ತು, ಕ್ಲಾರಿಫಿಕೇಶನ್ ಮಾತ್ರ ಕೇಳಿ ಎಂದು ಹೇಳುತ್ತಿರುವುದು.

ಶ್ರೀ ನೆ.ಲ. ನರೇಂದ್ರಬಾಬು: ಸಮಯ ವೇಸ್ಟ್ ಆಗುತ್ತಿದೆ. ಹಣ ವೇಸ್ಟ್ ಆಗುತ್ತಿದೆ. ಇದರ ದೃಷ್ಟಿ ಇಟ್ಟುಕೊಂಡು ಈ ಕೆಲಸಗಳನ್ನು ಮಾಡಬಹುದಾಗಿತ್ತಲ್ಲಾ. ಮಾಡಲಿಕ್ಕೆ ಈ ಸರ್ಕಾರ ಆ ಸರ್ಕಾರ ಎಂದಲ್ಲ. ಇಂಥ ಯೋಜನೆಗಳು ನೆನಗುದಿಗೆ ಬೀಳುತ್ತಿವೆಯಲ್ಲಾ. ಕೇವಲ Devaraj Urs Truck Terminal ಒಂದನ್ನು ಇದುವರೆಗೆ ಮಾಡುವುದಕ್ಕೆ ಆಗಲಿಲ್ಲ. ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ತಮ್ಮ ಮುಖೇನ ವಿನಂತಿ ಮಾಡುತ್ತೇನೆ. ಮುಖ್ಯ ಕಾರ್ಯದರ್ಶಿಗಳು ಕ್ರಮ ತೆಗೆದುಕೊಂಡು ತೀರ್ಮಾನ ತೆಗೆದುಕೊಳ್ಳಬೇಕಾಗಿತ್ತು. ಮಾನ್ಯ ಮುಖ್ಯಮಂತ್ರಿಗಳು ದಯವಿಟ್ಟು ಇದರ ಬಗ್ಗೆ ಗಮನ ಹರಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ನಿಗದಿತ ಅವಧಿಯೊಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸಲು ಏನು ನ್ಯೂನತೆಗಳು ಇವೆ ಅವುಗಳನ್ನು ಸರಿಪಡಿಸಲು ಕ್ರಮ ತೆಗೆದುಕೊಳ್ಳುತ್ತೇನೆ.

ಈ) ವಿಷಯ: ಬೀದರ್ ಜಿಲ್ಲೆ ಔರಾದ್ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಆಕಾಲಿಕ ಮಳೆಯಿಂದ ರೈತರಿಗಾಗಿರುವ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ.

ಶ್ರೀ ಬಸವರಾಜ ರಾಯರೆಡ್ಡಿ(ಯಲಬುರ್ಗ): ಮಾನ್ಯ ಅಧ್ಯಕ್ಷರೆ ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ಇತ್ತೀಚೆಗೆ ಬಿದ್ದ ಆಕಾಲಿಕ ಮಳೆಯಿಂದ ರೈತರಿಗಾಗಿರುವ ನಷ್ಟಕ್ಕೆ ಪರಿಹಾರ ನೀಡುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೆ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನಲ್ಲಿ ದಿನಾಂಕ: 3.3.2006 ಮತ್ತು 4.3.2006ರಂದು ಬಿದ್ದ ಅಕಾಲಿಕ ಮಳೆಯಿಂದಾಗಿ ಕೆಳಗಿನಂತೆ ನಷ್ಟ ಸಂಭವಿಸಿರುತ್ತದೆ:

1)	3353.32 ಎ.ಗು.	– ರೂ.132.00 ಲಕ್ಷದಷ್ಟು ಬೆಳೆ
2)	ಭಾಗಶಃ ಮನೆಹಾನಿ	– ರೂ. 10.00 ಲಕ್ಷ
3)	ಜಾನುವಾರುಗಳ ಹಾನಿ	– ರೂ. 5.00 ಲಕ್ಷ
	ಒಟ್ಟು	ರೂ.147.00 ಲಕ್ಷ

ಬೀದರ್ ಜಿಲ್ಲೆಯ ಔರಾದ ತಾಲ್ಲೂಕಿನಲ್ಲಿ ಮಾತ್ರ ಅಕಾಲಿಕ ಆಲಿಕಲ್ಲು ಮಳೆಯಿಂದಾಗಿ ನಷ್ಟವಾಗಿರುವ ಬಗ್ಗೆ ಸಹಾಯಕ ಆಯುಕ್ತರು ಬೀದರ್ ಮತ್ತು ತಹಶೀಲ್ದಾರ್ ಔರಾದ್ ರವರು ಹಾನಿಯ ಕುರಿತು ಸಮೀಕ್ಷೆ ಕೈಗೊಂಡು ಸಲ್ಲಿಸಿರುವ ವರದಿ ಆಧರಿಸಿ ಬಿಡುಗಡೆ ಮಾಡಲಾಗಿದೆ.

ಇದಕ್ಕೆ ಪರಿಹಾರ ನೀಡಲು ರಾಜ್ಯ ಸರ್ಕಾರದಿಂದ ರೂ.25.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ. ರೂ.14.53 ಲಕ್ಷದಷ್ಟು ಪರಿಹಾರ ನೀಡಲಾಗಿದೆ. ಪರಿಹಾರವನ್ನು CRF /NCCF ಮಾರ್ಗಸೂಚಿಗಳ ಪ್ರಕಾರ ನೀಡಬೇಕಾಗಿರುತ್ತದೆ. ಪ್ರವಾಹಪೀಡಿತ ಪ್ರದೇಶಗಳಲ್ಲಿ CRF /NCCF ಮಾರ್ಗಸೂಚಿಗಳ ಪ್ರಕಾರ ಬೆಳೆಗಳಿಗೆ ನೀಡಬೇಕಾದ ಪರಿಹಾರವನ್ನು ದುಪ್ಪಟ್ಟು ನೀಡಲಾಗಿರುವ ಪ್ಯಾಕೇಜನ್ನು ಇತ್ತೀಚೆಗೆ ಮಳೆಹಾನಿಯಾಗಿರುವ ಬೀದರ್ ಜಿಲ್ಲೆಗೂ ಅನ್ವಯಿಸಿ ಬೆಳೆ ಪರಿಹಾರವನ್ನು ದ್ವಿಗುಣದಲ್ಲಿ ನೀಡುವಂತೆ ಸರ್ಕಾರದ ಪತ್ರ ಸಂಖ್ಯೆ: ಆರ್‌ಡಿ 496 TNR 2005, ದಿನಾಂಕ: 23.3.2006ರಲ್ಲಿ ಸೂಚನೆ ನೀಡಲಾಗಿದೆ.

ಶ್ರೀ ಪ್ರಕಾಶ್ ಖಂಡ್ರೆ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳನ್ನು ಕೇಳುವುದು ಏನೆಂದರೆ ಬೀದರ್ ಜಿಲ್ಲೆ ಔರಾದ್ ಒಂದೇ ತಾಲ್ಲೂಕಿನಲ್ಲಿ ಅಲಿಕಲ್ಲು ಮಳೆ ಬಿದ್ದಿದೆಯಾ ಅಥವಾ ಬೇರೆ ತಾಲ್ಲೂಕಿನಲ್ಲೂ ಬಿದ್ದಿದೆಯಾ?

ಒಬ್ಬರು ಮಾನ್ಯ ಸದಸ್ಯರು: ನಾವೂ ಬೀದರ್ ಜಿಲ್ಲೆಯವರು, ನಾವು ಔರಾದ್ ಬಗ್ಗೆ ಮಾತನಾಡಬೇಕು.

ಅಧ್ಯಕ್ಷರು: ನೀವು ಸಿಗ್ನೇಟರಿ ಅಲ್ಲ, ಇವರು ಸಿಗ್ನೇಟರಿ ಆಗಿದ್ದಾರೆ.

ಶ್ರೀ ಬಸವರಾಜ್‌ರಾಯರೆಡ್ಡಿ: ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೇಂದ್ರದ ಪರಿಹಾರದ ವಿಚಾರದಲ್ಲಿ ಮಾನ್ಯ ಮಂತ್ರಿಗಳು, ಬೇರೆ ಪ್ರಶ್ನೆಯನ್ನು ಎತ್ತಿದಾಂತಹ ಸಂದರ್ಭದಲ್ಲಿ ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತಾವು ಅವಕಾಶ ಮಾಡಿಕೊಟ್ಟಿದ್ದೀರಿ. ಇದು ಬಹಳ ಪ್ರಮುಖವಾದಂತಹ ಪ್ರಶ್ನೆ. ಕೇಂದ್ರದಿಂದ ಏನು ಸಿಆರ್‌ಎಫ್ ಮತ್ತು ಎನ್‌ಸಿಸಿಎಫ್ ಬರುತ್ತದೆ, ಅದರ ಮಾರ್ಗಸೂಚಿ ಸರಿಯಾಗಿಲ್ಲ. ಅದರ ಬಗ್ಗೆ ಒಂದು ಸವಿಸ್ತಾರವಾಗಿ ಚರ್ಚೆಯಾಗಬೇಕಾಗಿದೆ.

ಅಧ್ಯಕ್ಷರು: ಅದರ ಬಗ್ಗೆ ಈಗಾಗಲೇ ಅರ್ಧ ಗಂಟೆ ಚರ್ಚೆಗೆ ಅವಕಾಶ ಮಾಡಿಕೊಟ್ಟಿದ್ದೇನಲ್ಲ.

ಶ್ರೀ ಬಸವರಾಜ್‌ರಾಯರೆಡ್ಡಿ: ಅದರ ಬಗ್ಗೆ ಹೇಳುತ್ತೇನೆ, ತಾವು ಅದರ ಬಗ್ಗೆ ಅರ್ಧ ಗಂಟೆಗೆ ಚರ್ಚೆಗೆ ಅನುವು ಮಾಡಿಕೊಟ್ಟಿದ್ದರಿಂದ, ಸಮಯದಲ್ಲೆ ಈ ವಿಚಾರವನ್ನು ಸೇರಿಸಿ ಮಾತನಾಡುವುದಕ್ಕೆ ಅವಕಾಶವಾಗುತ್ತದೆ ಎಂದು ಹೇಳುವಂತಹ ಮಾತನ್ನು ತಮ್ಮ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಅಧ್ಯಕ್ಷರೆ, . . .

ಅಧ್ಯಕ್ಷರು: ಅದು ಚರ್ಚೆಗೆ ಅವಕಾಶ ಇದೆ. ಈಗ ಸುಮ್ಮನೆ ಇರಿ.

ಉ) ವಿಷಯ: ನಗರ ಯೋಜನಾ ಇಲಾಖೆಯು ಕಟ್ಟಡ ಪರವಾನಿಗೆಯನ್ನು ತಿರಸ್ಕರಿಸಿದ ಸಂದರ್ಭಗಳಲ್ಲಿ ಪರವಾನಗಿ ಮಂಜೂರು ಮಾಡಲು ಸ್ಥಾಯಿ ಸಮಿತಿಗೆ ನೀಡುರುವ ಅಧಿಕಾರಿದ ಬಗ್ಗೆ.

ಶ್ರೀ ಕೆ. ಗೋಪಾಲ ಪೂಜಾರಿ(ಬೈಂದೂರು): ಮಾನ್ಯ ಅಧ್ಯಕ್ಷರೆ, ನಗರ ಯೋಜನಾ ಇಲಾಖೆಯು ಕಟ್ಟಡ ಪರವಾನಿಗೆಯನ್ನು ತಿರಸ್ಕರಿಸಿದ ಸಂದರ್ಭಗಳಲ್ಲಿ ಪರವಾನಿಗೆ ಮಂಜೂರು ಮಾಡಲು ಸ್ಥಾಯಿ ಸಮಿತಿಗೆ ನೀಡಿರುವ ಅಧಿಕಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ(ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡುತ್ತೇನೆ.

1964ನೇ ಕರ್ನಾಟಕ ಪೌರಸಭೆಗಳ ಅಧಿನಿಯಮದ ಕಲಂ 187ರನ್ವಯ ಹೊಸ ಕಟ್ಟಡಗಳ ನಿರ್ಮಾಣ ಅಥವಾ ನವೀಕರಣ ಅಥವಾ ದುರಸ್ತಿ ಕಾರ್ಯಗಳಿಗೆ ಪರವಾನಗಿ ನೀಡುವ ಅಧಿಕಾರ ಪೌರಾಯುಕ್ತರು:ಮುಖ್ಯಾಧಿಕಾರಿಗಳಿಗೆ ಪ್ರದತ್ತವಾಗಿರುತ್ತದೆ. ಕಾನೂನು ಮತ್ತು ಅನುಮೋದಿತ ನಕ್ಷೆಗೆ ವಿರುದ್ಧವಾಗಿ ಕಟ್ಟಡ ನಿರ್ಮಾಣ ಮಾಡಿದಂತಹ ಪ್ರಕರಣಗಳಲ್ಲಿ ಕಲಂ 187(9)(ಸಿ) ಪ್ರಕಾರ ಪೌರಾಯುಕ್ತರು: ಮುಖ್ಯಾಧಿಕಾರಿಗಳು ಕ್ರಮ ಜರುಗಿಸಲು ಅಧಿಕಾರವಿರುತ್ತದೆ. ಕಟ್ಟಡ ಪರವಾನಗಿಗೆ ವಿರುದ್ಧವಾಗಿ ನಿರ್ಮಾಣ ಮಾಡುತ್ತಿರುವ ಪ್ರಕರಣಗಳಲ್ಲಿ ಪೌರಾಯುಕ್ತರು:ಮುಖ್ಯಾಧಿಕಾರಿಗಳು ನಿಯಮದ ಪ್ರಕಾರ ತೆಗೆದುಕೊಳ್ಳುವ ಕ್ರಮವನ್ನು ಪ್ರಶ್ನಿಸಿ 1967ರ ಕರ್ನಾಟಕ ಪುರಸಭೆಗಳ ಮೇಲ್ಮನವಿ ಮತ್ತು ಪರಿಷ್ಕರಣೆ ನಿಯಾಮಾವಳಿಯ ನಿಯಮ 3ರ ಪ್ರಕಾರ ಕೌನ್ಸಿಲಿಗೆ ಮೇಲ್ಮನವಿ ಸಲ್ಲಿಸಲು ಅವಕಾಶವಿರುತ್ತದೆ. ಕೋರಲಾದಂತಹ ಕಟ್ಟಡ ಪರವಾನಿಗೆಯು ಬಿಲ್ಡಿಂಗ್ ಬೈಲಾಗಳಿಗೆ ವ್ಯತಿರಿಕ್ತವಾಗಿದೆಯೆಂದು ತಿರಸ್ಕರಿಸದಂತಹ ಪ್ರಕರಣಗಳಲ್ಲಿ ಮೇಲ್ಮನವಿಗೆ ಅವಕಾಶವಿರುವುದಿಲ್ಲ. ಸ್ವೀಕೃತವಾದ ಮೇಲ್ಮನವಿಯನ್ನು ನಿಯಮಾನುಸಾರ ಪರಿಶೀಲಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ಕೌನ್ಸಿಲ್‌ಗೆ ಪ್ರದತ್ತವಾಗಿರುತ್ತದೆ. ಕೌನ್ಸಿಲ್‌ಗೆ ಪ್ರದತ್ತವಾಗಿರುವಂತಹ ಈ ಅಧಿಕಾರವನ್ನು ಕೌನ್ಸಿಲ್ 1973ನೇ ಕರ್ನಾಟಕ ಪೌರಸಭೆಗಳ ಅಧಿಕಾರ ಪ್ರತ್ಯಾಯೋಜನೆ ನಿಯಮಾವಳಿಯ ನಿಯಮ(3)ರ ಉಪ ನಿಯಮ (3)(II) ರಲ್ಲಿ ತಿಳಿಸಿರುವಂತೆ ಸ್ಥಾಯಿ ಸಮಿತಿಯ ಅಧ್ಯಕ್ಷರು ಸ್ವೀಕೃತಿಯಾದಂತಹ ಮೇಲ್ಮನವಿಗಳನ್ನು ನಿಯಮಾನುಸಾರ ವಿಲೇಪಡಿಸಬೇಕಾಗಿರುತ್ತದೆ. ಆದರೆ, ಕೌನ್ಸಿಲ್ ಸ್ಥಾಯಿ ಸಮಿತಿಗೆ ಅಧಿಕಾರ ಪ್ರತ್ಯಾಯೋಜನೆ ಮಾಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ. ಕಟ್ಟಡ ನಿಯಾಮಾವಳಿ ಹಾಗೂ ನಗರ ಯೋಜನಾ ಇಲಾಖೆಯ ಅಂಶಗಳಿಗೆ ತಾಂತ್ರಿಕ ಅಂಶಗಳಿಗೆ ವ್ಯತಿರಿಕ್ತವಾಗಿ ಕೋರಿದ ಪರವಾನಿಗೆಯನ್ನು ಪೌರಾಯುಕ್ತರು ತಿರಸ್ಕರಿಸಿದ ಸಂದರ್ಭಗಳಲ್ಲಿ ಕೌನ್ಸಿಲ್‌ಗಾಗಲೀ ಅಥವಾ ಸ್ಥಾಯಿ ಸಮಿತಿಗಾಗಲೀ ಮೇಲ್ಮನವಿ ಸಲ್ಲಿಸಲು ನಿಯಮಗಳಲ್ಲಿ ಅವಕಾಶವಿಲ್ಲ.

ಉಡುಪಿ ನಗರಸಭೆಯು ದಿನಾಂಕ:7-2-2004ರಂದು ನಡೆದ ಮತ್ತು ದಿನಾಂಕ: 22-1-2005ಕ್ಕೆ ಮುಂದೂಡಲ್ಪಟ್ಟ ಸಾಮಾನ್ಯ ಸಭೆಯ ನಿರ್ಣಯ ಸಂಖ್ಯೆ:946ರಲ್ಲಿ ತೆಗೆದುಕೊಂಡಿರುವ ನಿರ್ಣಯವು ಕಾನೂನು ಬಾಹಿರವಾಗಿದ್ದಲ್ಲಿ ಅಂತಹ ನಿರ್ಣಯವನ್ನು ರದ್ದುಪಡಿಸಲುವ ಬಗ್ಗೆ ಪರಿಶೀಲಿಸಿ ನಿಯಮಾನುಸರ ಕ್ರಮ ತೆಗೆದುಕೊಳ್ಳಲಾಗುವುದು.